# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,_
# ಹಾಗು ವಿಶೇಷ ನ್ಯಾಯಾಲಯ. ಹಾವೇರಿ
## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ಸಿ/ಎಸ್.ಟಿ.20/2021

ಪಿರ್ಯಾದಿಃ ಹಾವೇರಿ ಶಹರ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿತರುಃ 1. ಶಂಭುಲಿಂಗ ಈರಣ್ಣ ಪೋರಾಪುರ

ವಯಸ್ಸುಃ 32 ವರ್ಷ,

2. ಮಂಜುನಾಥ ಸುರೇಶ್ ಯರೆಶೀಮಿ

ವಯಸ್ಸುಃ 24 ವರ್ಷ,

ಸಾಃ ಯತ್ತಿನಹಳ್ಳಿ,ತಾಃ ಹಾವೇರಿ

## ಹೆಚ್ಚುವರಿ ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ಹೆಚ್ಚುವರಿ ದೋಷಾರೋಪಣೆಗಳೇನೆಂದರೆ,

1. ದಿನಾಂಕಃ16.03.2021 ರಂದು ಸಂಜೆ 4.00 ರಿಂದ ರಾತ್ರಿ 8.00 ಗಂಟೆಯವರೆಗೆ ಗುತ್ತಲ ರಸ್ತೆಯಲ್ಲಿರುವ ಎ.ಪಿ.ಎಂ.ಸಿಯಲ್ಲಿ ಆರೋಪಿತರು ಮತ್ತು ಮೃತ ನಿಂಗಪ್ಪ ಕೂಡಿ ಮಾತನಾಡುತ್ತಾ ಕುಳಿತುಕೊಂಡಾಗ ನಿಂಗಪ್ಪನು 1ನೇ ಆರೋಪಿಗೆ 20 ಸಾವಿರ ಹಣ ಅರ್ಜೆಂಟ್ ಬಹಳ ಇದೆ ನೀನು ನನಗೆ ಹಣ ಕೊಡಲೇಬೇಕು ಅಂತಾ ಒತ್ತಾಯಮಾಡಿ ಬೈದಾಡಿದ್ದಲ್ಲದೇ, ನೀನು ಹಣ ಕೊಡದೇ ಹೋದರೆ ನಿನ್ನ ಮೋಟಾರ್ ಸೈಕಲ್ ತೆಗೆದುಕೊಂಡು ಹೋಗಿ ಒತ್ತೆ ಇಡುತ್ತೇನೆ ಅಂತಾ ಮೋಟಾರ್ ಸೈಕಲ್ ನ್ನು ಕಸಿದುಕೊಂಡು ಹೋಗಿದ್ದು, ಈ

ಹಿಂದೆಯೂ ಸಹ ನಿಂಗಪ್ಪನು ಆರೋಪಿತರಿಂದ ಪಡೆದ ಸಾಲ ವಾಪಸ್ ಕೊಡದೇ ದಬ್ಬಾಳಿಕೆ ಮಾಡಿದ್ದು, ಇದೇ ಸಿಟ್ಟಿನಿಂದ ಆರೋಪಿತರು ಅದೇ ದಿನ ರಾತ್ರಿ 11.00 ಗಂಟೆ ಸುಮಾರಿಗೆ ನಿಂಗಪ್ಪ ಮತ್ತು ಆತನ ಸಹಚರ ಗಣೇಶ ಯತ್ತಿನಹಳ್ಳಿ ಗ್ರಾಮದ ಶಂಭುಲಿಂಗ ಇವನ ಲಾರಿ ಆಫೀಸಿನಲ್ಲಿ ಮಲಗಿದ್ದನ್ನು ಖಚಿತಪಡಿಸಿಕೊಂಡು ಕೊಲೆ ಮಾಡುವ ಉದ್ದೇಶದಿಂದ ಲಾರಿಯಲ್ಲಿದ್ದ ಮೋಟಾರ್ ಸೈಕಲ್ಲಿನ ಪೋರ್ಕ್ ರಾಡ್ ಮತ್ತು ವೀಲ್ ಪಾನಾ ತೆಗೆದುಕೊಂಡು ಒಳಗೆ ಹೋಗಿ 1 ನೇ ಆರೋಪಿ ಪೋರ್ಕ್ ರಾಡ್ ನಿಂದ ನಿಂಗಪ್ಪನ ತಲೆಗೆ 3-4 ಬಾರಿ ಹೊಡೆದಾಗ ಸಪ್ಪಳ ಕೇಳಿ ಪಕ್ಕದಲ್ಲಿ ಮಲಗಿದ್ದ ಗಣೇಶ ಎಚ್ಚರಗೊಂಡಾಗ ಇದನ್ನು ನೋಡಿದ 2 ನೇ ಆರೋಪಿ ವೀಲ್ ಪಾನಾದಿಂದ ಗಣೇಶನ ತಲೆಗೆ ಒಂದು ಬಾರಿ ಹೊಡೆದು ನಂತರ ಅದೇ ಆಫೀಸಿನಲ್ಲಿದ್ದ ಕಬ್ಬಿಣದ ಡಂಬೆಲ್ಸ್ ತೆಗೆದುಕೊಂಡು ಗಣೇಶನ ತಲೆಗೆ ಎರಡು ಬಾರಿ ಬಲವಾಗಿ ಹೊಡೆದು, ನಿಂಗಪ್ಪ ಮತ್ತು ಗಣೇಶ ಇವರಿಬ್ಬರ ತಲೆಗೆ ಹೊಡೆದು ಕೊಲೆ ಮಾಡಿದ್ದು ಆ ಮೂಲಕ ನೀವು ಭಾ.ದಂ.ಸಂಹಿತೆ ಕಲಂ 302 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನ, ಸಮಯ ಸ್ಥಳ, ಸಂದರ್ಭದಲ್ಲಿ ದಿನಾಂಕಃ16.03.2021 ರಂದು ಸಂಜೆ 4.00 ರಿಂದ ರಾತ್ರಿ 8.00 ಗಂಟೆಯವರೆಗ ಗುತ್ತಲ ರಸ್ತೆಯಲ್ಲಿರುವ ಎ.ಪಿ.ಎಂ.ಸಿಯಲ್ಲಿ ಆರೋಪಿತರು ಮತ್ತು ಮೃತ ನಿಂಗಪ್ಪ ಕೂಡಿ ಮಾತನಾಡುತ್ತಾ ಕುಳಿತುಕೊಂಡಾಗ ನಿಂಗಪ್ಪನು 1 ನೇ ಆರೋಪಿಗೆ 20 ಸಾವಿರ ಹಣ ಅರ್ಜೆಂಟ್ ಬಹಳ ಇದೆ ನೀನು ನನಗೆ ಹಣ ಕೊಡಲೇಬೇಕು ಅಂತಾ ಒತ್ತಾಯಮಾಡಿ ಬೈದಾಡಿದ್ದಲ್ಲದೇ, ನೀನು ಹಣ ಕೊಡದೇ ಹೋದರೆ ನಿನ್ನ ಮೋಟಾರ್ ಸೈಕಲ್ ತೆಗೆದುಕೊಂಡು ಹೋಗಿ ಒತ್ತೆ ಇಡುತ್ತೇನೆ ಅಂತಾ ಮೋಟಾರ್ ಸೈಕಲ್ ನ್ನು ಕಸಿದುಕೊಂಡು ಹೋಗಿದ್ದು, ಈ ಹಿಂದೆಯೂ ಸಹ ಪಡೆದ ಸಾಲ ವಾಪಸ್ ಕೊಡದೇ ದಬ್ಬಾಳಿಕೆ ಮಾಡಿದ್ದು, ಇದೇ ಸಿಟ್ಟಿನಿಂದ ಆರೋಪಿತರು ಅದೇ ದಿನ ರಾತ್ರಿ 11.00 ಗಂಟೆ ಸುಮಾರಿಗೆ ನಿಂಗಪ್ಪ ಮತ್ತು ಆತನ ಸಹಚರ ಗಣೇಶ ಯತ್ತಿನಹಳ್ಳಿ ಗ್ರಾಮದ ಶಂಭುಲಿಂಗ ಇವನ ಲಾರಿ ಆಫೀಸಿನಲ್ಲಿ ಮಲಗಿದ್ದನ್ನು ಖಚಿತಪಡಿಸಿಕೊಂಡು ಕೊಲೆ ಮಾಡುವ

ಉದ್ದೇಶದಿಂದ ಲಾರಿಯಲ್ಲಿದ್ದ ಮೋಟಾರ್ ಸೈಕಲ್ಲಿನ ಫೋರ್ಕ್ ರಾಡ್ ಮತ್ತು ವೀಲ್ ಪಾನಾ ತೆಗೆದುಕೊಂಡು ಒಳಗೆ ಹೋಗಿ 1 ನೇ ಆರೋಪಿ ಫೋರ್ಕ್ ರಾಡ್ ನಿಂದ ನಿಂಗಪ್ಪನ ತಲೆಗೆ 3-4 ಬಾರಿ ಹೊಡೆದಾಗ ಸಪ್ಪಳ ಕೇಳಿ ಪಕ್ಕದಲ್ಲಿ ಮಲಗಿದ್ದ ಗಣೇಶ ಎಚ್ಚರಗೊಂಡಾಗ ಇದನ್ನು ನೋಡಿದ 2 ನೇ ಆರೋಪಿ ವೀಲ್ ಪಾನಾದಿಂದ ಗಣೇಶನ ತಲೆಗೆ ಒಂದು ಬಾರಿ ಹೊಡೆದು ನಂತರ ಅದೇ ಆಫೀಸಿನಲ್ಲಿ ಇದ್ದ ಕಬ್ಬಿಣದ ಡಂಬೆಲ್ಸ್ ತೆಗೆದುಕೊಂಡು ಗಣೇಶನ ತಲೆಗೆ ಎರಡು ಬಾರಿ ಬಲವಾಗಿ ಹೊಡೆದು, ನಿಂಗಪ್ಪ ಮತ್ತು ಗಣೇಶ ಇವರಿಬ್ಬರ ತಲೆಗೆ ಹೊಡೆದು ಕೊಲೆ ಮಾಡಿ ನಂತರ ಕೊಲೆ ಮಾಡಲು ಉಪಯೋಗಿಸಿದ ಆಯುಧಗಳನ್ನು ಹಾಗು ತಮ್ಮ ಮೈಮೇಲಿನ ಬಟ್ಟೆಗಳನ್ನು ನಾಶ ಮಾಡಲು ಪ್ರಯತ್ನಿಸಿದ್ದು ಆ ಮೂಲಕ ನೀನು ಭಾ.ದಂ.ಸಂಹಿತೆ ಕಲಂ 201 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನ, ಸಮಯ ಸ್ಥಳ, ಸಂದರ್ಭದಲ್ಲಿ 1 ನೇ ಆರೋಪಿ ಹಿಂದೂ ಲಿಂಗಾಯತ ಜಾತಿಗೆ ಸೇರಿದ್ದು, 2 ನೇ ಆರೋಪಿ ಹಿಂದೂ ಕುರುಬ ಜಾತಿಗೆ ಸೇರಿದ್ದು, ಮೃತ ನಿಂಗಪ್ಪ ಮತ್ತು ಗಣೇಶ ಇವರು ಹಿಂದೂ ಮಾದರ ಜಾತಿಗೆ ಸೇರಿದವರು ಎಂದು ಗೊತ್ತಿದ್ದರೂ ಸಹ ದಿನಾಂಕಃ16.03.2021 ರಂದು ಸಂಜೆ 4.00 ರಿಂದ ರಾತ್ರಿ 8.00 ಗಂಟೆಯವರೆಗ ಗುತ್ತಲ ರಸ್ತೆಯಲ್ಲಿರುವ ಎ.ಪಿ.ಎಂ.ಸಿಯಲ್ಲಿ ಆರೋಪಿತರು ಮತ್ತು ಮೃತ ನಿಂಗಪ್ಪ ಕೂಡಿ ಮಾತನಾಡುತ್ತಾ ಕುಳಿತುಕೊಂಡಾಗ ನಿಂಗಪ್ಪನು 1 ನೇ ಆರೋಪಿಗೆ 20 ಸಾವಿರ ಹಣ ಅರ್ಜೆಂಟ್ ಬಹಳ ಇದೆ ನೀನು ನನಗೆ ಹಣ ಕೊಡಲೇಬೇಕು ಅಂತಾ ಒತ್ತಾಯಮಾಡಿ ಬೈದಾಡಿದ್ದಲ್ಲದೇ, ನೀನು ಹಣ ಕೊಡದೇ ಹೋದರೆ ನಿನ್ನ ಮೋಟಾರ್ ಸೈಕಲ್ ತೆಗೆದುಕೊಂಡು ಹೋಗಿ ಒತ್ತೆ ಇಡುತ್ತೇನೆ ಅಂತಾ ಮೋಟಾರ್ ಸೈಕಲ್ ನ್ನು ಕಸಿದುಕೊಂಡು ಹೋಗಿದ್ದು, ಈ ಹಿಂದೆಯೂ ಸಹ ಪಡೆದ ಸಾಲ ವಾಪಸ್ ಕೊಡದೇ ದಬ್ಬಾಳಿಕೆ ಮಾಡಿದ್ದು, ಇದೇ ಸಿಟ್ಟಿನಿಂದ ಆರೋಪಿತರು ಅದೇ ದಿನ ರಾತ್ರಿ 11.00 ಗಂಟೆ ಸುಮಾರಿಗೆ ನಿಂಗಪ್ಪ ಮತ್ತು ಆತನ ಸಹಚರ ಗಣೇಶ ಯತ್ತಿನಹಳ್ಳಿ ಗ್ರಾಮದ ಶಂಭುಲಿಂಗ ಇವನ ಲಾರಿ ಆಫೀಸಿನಲ್ಲಿ ಮಲಗಿದ್ದನ್ನು

ಖಚಿತಪಡಿಸಿಕೊಂಡು ಕೊಲೆ ಮಾಡುವ ಉದ್ದೇಶದಿಂದ ಲಾರಿಯಲ್ಲಿದ್ದ ಮೋಟಾರ್ ಸೈಕಲ್ಲಿನ ಪೋರ್ಕ್ ರಾಡ್ ಮತ್ತು ವೀಲ್ ಪಾನಾ ತೆಗೆದುಕೊಂಡು ಒಳಗೆ ಹೋಗಿ 1 ನೇ ಆರೋಪಿ ಪೋರ್ಕ್ ರಾಡ್ ನಿಂದ ನಿಂಗಪ್ಪನ ತಲೆಗೆ 3-4 ಬಾರಿ ಹೊಡೆದಾಗ ಸಪ್ಪಳ ಕೇಳಿ ಪಕ್ಕದಲ್ಲಿ ಮಲಗಿದ್ದ ಗಣೇಶ ಎಚ್ಚರಗೊಂಡಾಗ ಇದನ್ನು ನೋಡಿದ 2 ನೇ ಆರೋಪಿ ವೀಲ್ ಪಾನಾದಿಂದ ಗಣೇಶನ ತಲೆಗೆ ಒಂದು ಬಾರಿ ಹೊಡೆದು ನಂತರ ಅದೇ ಆಫೀಸಿನಲ್ಲಿ ಇದ್ದ ಕಬ್ಬಿಣದ ಡಂಬೆಲ್ಸ್ ತೆಗೆದುಕೊಂಡು ಗಣೇಶನ ತಲೆಗೆ ಎರಡು ಬಾರಿ ಬಲವಾಗಿ ಹೊಡೆದು, ನಿಂಗಪ್ಪ ಮತ್ತು ಗಣೇಶ ಇವರಿಬ್ಬರ ತಲೆಗೆ ಹೊಡೆದು ಕೊಲೆ ಮಾಡಿದ್ದು ಆ ಮೂಲಕ ಆರೋಪಿಯಾದ ನೀನು ಕಲಂ.3(2)(V), 3(2)(Va) SC/ST P.A Act-2015 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಣೆಗಳಿಗಾಗಿ ಹಾವೇರಿ ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಿಮ್ಮ ಮೇಲೆ ಮೊಕದ್ದಮೆ ನಡೆಯತಕ್ಕದ್ದು ಅಂತಾ ಆದೇಶಿಸಿದ್ದೇನೆ.

ದಿನಾಂಕಃ16.09.2025
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು,
ಹಾವೇರಿ